ಪಿ. ಗೋವಿಂದರಾಜ್, ಶಿವಮೊಗ್ಗ

ಹಗಲುಗನಸು ಕಾಣುವುದು ಹುಡುಗರು ಹೆಚ್ಚೋ, ಹುಡುಗಿಯರೋ?



ಬಾಲೆಗೆ ಡ್ರೆಸ್, ಮೇಕಪ್‌ಗೆ ಸಮಯ ಬೇಕಾದ್ದರಿಂದ ಹೆಚ್ಚು ಡೇಟೈಮ್ ಸಿಗುವ ಹುಡುಗರೇ.

ಎ.ಎಸ್. ಸ್ವಾಮಿ, ಶೋರಾಪುರ

ತಾಪತ್ರಯಗಳು ಬಂದೆರಗುವುದೇಕೆ?

ಅರಿಷಡ್ವರ್ಗಗಳನ್ನು ನಿಯಂತ್ರಿಸದಿರುವುದರಿಂದ.

ರಾಜಶೇಖರ ಹಾದಿಮನಿ, ಧಾರವಾಡ

ನಿದ್ದೆ ಮಾಡುವವರನ್ನು ಇಲ್ಲಿಯ ಪಾಲಿಕೆಯಲ್ಲಿಟ್ಟು ತೂಗಿ ಕೈಬಿಟ್ಟಿದ್ದಾರೆ. ನೋಡಲು ಬರುವಿರಾ?

ಊಹೂಂ. ನನಗೆ ಮನೆಯಲ್ಲೇ ವಿಧಾನಸೌಧದ ಸೆಷನ್ನಿನ ನೇರಪ್ರಸಾರದಲ್ಲಿ ಸೇಮ್ ಪೋಸ್ ಕಾಣಸಿಗುತ್ತದೆ.

ಎಂ.ಎ. ಕುಮಾರ್, ಬೆಂಗಳೂರು

ಒನಕೆ ಬಳಸಿದ ಓಬವ್ವ, ಕತ್ತಿ ಬೀಸಿದ ರಾಣಿ ಚೆನ್ನಮ್ಮರ ಆಯುಧದ ಶಕ್ತಿಯೇನು?



ದೇಶಪ್ರೇಮ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಮೆದುಳಿಗೆ ಹತ್ತಿದ ದೂಳನ್ನು ತೆಗೆಯುವುದು ಹೇಗೆ?

ಚರ್ಚೆ, ಓದುಗಳೆಂಬ ಕ್ಲೀನಿಂಗ್ ಏಜೆಂಟನ್ನು ಬಳಸಿ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ

ಕೆಲವರು ರಿಕ್ತಹಸ್ತರಾಗಿ ಬಂದು ಹೋಗುವಾಗ ಎರಡೂ ಕೈಗಳಲ್ಲಿ ಸೂಟ್‌ಕೇಸ್ ಹಿಡಿದು ಹೋಗುವರಲ್ಲ?

ಹಸ್ತ ರಿಕ್ತವಾಗಿದ್ದರೂ ಚಿತ್ತ ಲೆತ್ತವಾಡಿದುದರ ಫಲವದು.

ಎಲ್.ಐ.ಸಿ. ವಿಜೇಂದ್ರ, ಮೈಸೂರು

ಕೆಲವು ಸಾಹಿತಿಗಳೇಕೆ ಹುಚ್ಚರಂತೆ ವರ್ತಿಸುತ್ತಾರೆ?

ಕ್ಷಮಿಸಿ; ಅವರು ಹಾಗೆ ವರ್ತಿಸುವುದಿಲ್ಲ; ಅದೇ ಅವರ ನಿಜ ಸ್ವಭಾವ.

ಬಿ. ಬಸವರಾಜ್, ಹರಿಹರ

ಹೆಣ್ಣನ್ನು ಹೆಚ್ಚು ಅರ್ಥ ಮಾಡಿಕೊಳ್ಳಬಾರದಂತೆ. ಏಕೆ?

ಏಕೆಂದರೆ ಅರ್ಥ ಆಗದಿರುವಾಗಲೇ ಕುತೂಹಲ ಹೆಚ್ಚು.

ಎಸ್ಸೆನ್ ಮಹಾಬಲರಾವ್, ಎನ್ನಾರ್‌ಪುರ

ವಿಭೂತಿ ನೋಡಲೆಂದು ಹೋದವರಿಗೆ ವಿಭೂತಿ ಬಳಿಯಬೇಕಾಗಿ ಬಂದಿತಲ್ಲ?

ಕಾರಣ ತಿಳಿಯಿತು. ಕಿಂಕರರು ಯಮನಿತ್ತ ಮಂತ್ಲಿ ಟಾರ್ಗೆಟ್ ರೀಚ್ ಮಾಡಬೇಕಾಗಿತ್ತಂತೆ.

ಸಿ.ಎಸ್. ಸೂರ್ಯಪ್ರಕಾಶ್, ಬೆಂಗಳೂರು

‘ನಮ್ಮ ಸರ್ಕಾರ ಪಾರದರ್ಶಕ’ ಎಂದರೆ ಏನರ್ಥ?

‘ವ್ಯಾ’ ಅಕ್ಷರವನ್ನು ನುಂಗಿರುತ್ತಾರೆ. ಅದು ಅವರವರ ಬೆಲೆ ನಿಷ್ಕರ್ಷಿಸುವ ‘ವ್ಯಾಪಾರ ದರ್ಶಕ’.

ಮಲ್ಲಿಕಾರ್ಜುನ, ಸುರಧೇನುಪುರ

ಅಜಾತಮಿತ್ರ ಎಂದರೆ?

‘ಮೋಡ ಕವಿದ ದಿನ’ ಎಂದು. ಮಿತ್ರ ಎಂದರೆ ಸೂರ್ಯ.

ಮುರಲೀಧರ ಕುಲಕರ್ಣಿ, ಬೀದರ್

‘ಪರೋಪಕಾರಾರ್ಥಂ ಇದಂ ಶರೀರಂ’ ಎಂಬ ಮಾತಿಗೆ ಈಗ ಬೆಲೆ ಇದೆಯೆ?

‘ಅರ್ಥ(ಹಣ) ಪಡೆದು ಉಪಕರಿಸುವ ಶರೀರವಿದು’ ಎಂಬ ಅ(ನ)ರ್ಥ; ಹನಿಟ್ರ್ಯಾಪ್‌ಗಳಿಗೆ ಬೆಲೆ ಇದೆಯಲ್ಲ!

ಬಿ.ಆರ್. ಉಷಾ, ಬೆಂಗಳೂರು

ಮದುವೆ ಆದಮೇಲೆ ಹೆಣ್ಣೇ ಏಕೆ ಗಂಡಿನ ಮನೆಗೆ ಹೋಗಬೇಕು?

ಸಿಂಹದ ಬೋನಿಗೇ ನುಗ್ಗಿ ಪಳಗಿಸುವುದು ರಿಂಗ್ ಮಾಸ್ಟರ್‌ನ ಸ್ಪೆಷಾಲಿಟಿ.

**ಬಹುಮಾನಿತ ಪ್ರಶ್ನೆ**

ಕಾಳೀಹುಂಡಿ ಶಿವಕುಮಾರ್, ಮೈಸೂರು

ಟೀವಿ ಕಾರ್ಯಕ್ರಮ ನೋಡುತ್ತಿದ್ದವಳು ಈಗ ಆಕಾಶವಾಣಿ ಕಾರ್ಯಕ್ರಮ ಕೇಳಲು ಶುರು ಮಾಡಿದ್ದಾಳಲ್ಲಾ?

‘ಕೆಟ್ಟದ್ದನ್ನು ನೋಡಬೇಡಿ’ ಎಂಬ ಕೋತಿಯನ್ನು ಇತ್ತೀಚೆಗೆ ಕಂಡ ಶುಭ ಫಲವಂತೆ.

ಹೆಚ್.ವಿ. ಶ್ರೀಧರ್, ಬೆಂಗಳೂರು

ನಾವೇ ಮರ ಕಡಿದರೆ ಶಿಕ್ಷೆ. ಮರವೇ ನಮ್ಮ ಮೇಲೆ ಬಿದ್ದು ನಮ್ಮನ್ನು ಕಡಿದರೆ?

ಮೋಕ್ಷ!

ಬಿದರಹಳ್ಳಿ ವಿಜಯ, ಹಿರೇಹಡಗಲಿ

ಮಾನವನ ನಿಜವಾದ ಶಾಲೆ ಯಾವುದು?

ಹಸಿವು! ಹೊಟ್ಟೆಯ, ಜ್ಞಾನದ ಹಸಿವು ಕಲಿಸುವುದನ್ನು ಯಾವ ವಿಶ್ವವಿದ್ಯಾಲಯವೂ ಕಲಿಸದು.

ವಿ. ಹೇಮಂತಕುಮಾರ್, ಬೆಂಗಳೂರು

ನೀರಿನಲ್ಲಿ ಮುಳುಗುವುದಕ್ಕೂ, ನೆನಪಿನಲ್ಲಿ ಮುಳುಗುವುದಕ್ಕೂ ವ್ಯತ್ಯಾಸವೇನು?



ಇದು ಜಳಕ; ಅದು ಪುಳಕ.

ಕೆ.ಎಂ. ಕೊಟ್ರಸ್ವಾಮಿ, ಸಂಡೂರು

ಮಾತನಾಡುವುದಕ್ಕೂ ತೆರಿಗೆ ಇರುವಂತಿದ್ದರೆ?

ಕದ್ದು ಮಾತನಾಡುವುದು ಹೆಚ್ಚುತ್ತಿತ್ತು.

ಪಿ. ಜಯವಂತ ಪೈ, ಕುಂದಾಪುರ

ದೇವರ ಕೈಗೂ ಮೊಬೈಲ್ ಕೊಟ್ಟರೆ?

‘ಭಕ್ತರೆಲ್ಲ ವಾಟ್ಸಾಪಲ್ಲಿ ಬೇಡಿಕೆ ಕಳಿಸಿ ಪ್ರಾಣ ತಿಂತಾರೆ. ಬೇಸಿಕ್ ಸೆಟ್ಟೇ ಸಾಕು’ ಎನ್ನುತ್ತಾನೆ.

ವಸುಂಧರಾ ಸತ್ಯ, ದೊಡ್ಡಬಳ್ಳಾಪುರ

ಭೂತ, ಭವಿಷ್ಯತ್, ವರ್ತಮಾನ; ಇವುಗಳಲ್ಲಿ ಯಾವುದು ಶ್ರೇಷ್ಠ?

ನೆನ್ನೆಯ ಕನಸನ್ನು ನಾಳೆಯ ನನಸಾಗಿಸುವ, ಪದದಲ್ಲೇ worth ಇರುವ ವರ್ತಮಾನ.

**ರಾಮ್**